## ಕರ್ನಾಟಕ ಪಬ್ಲಿಕ್ ಸ್ಕೂಲ್‌ನ ನೂತನ ಕೊಠಡಿಗಳನ್ನು ಲೋಕಾರ್ಪಣೆಗೊಳಿಸಿದ ಸಚಿವ ಆರ್.ಬಿ ತಿಮ್ಮಾಪೂರ

# ಹೊರಟ್ಟಿಯವರಂತಹ ಜನಪ್ರತಿನಿಧಿಗಳ ಅಗತ್ಯತೆಯಿದೆ

■ವಿಜಯಸಾಕ್ಷಿ ಸುದ್ದಿ, ಗದಗ

ದೇಶದ ಇತಿಹಾಸದಲ್ಲಿಯೇ ಅತ್ಯಂತ ಹಿರಿಯ ವಿಧಾನ ಪರಿಷತ್ ಸದಸ್ಯರೆಂಬ ಕೀರ್ತಿಗೆ ಪಾತ್ರರಾದ ಸಭಾಪತಿ ಬಸವರಾಜ ಹೊರಟ್ಟಿಯವರು ಮುಧೋಳ ತಾಲೂಕಿಗೆ ನೀಡಿದ ಕೊಡುಗೆ ಹಾಗೂ ವಿಶೇಷವಾಗಿ ಹುಟ್ಟೂರಿನ ಯಡಹಳ್ಳಿಯಲ್ಲಿ ದೇಶದಲ್ಲಿಯೇ ಮಾದರಿಯಾದ ಸರಕಾರಿ ಶಾಲೆಯನ್ನು ಕಟ್ಟುವ ಮೂಲಕ ಈ ಭಾಗದ ಲಕ್ಷಾಂತರ ಗ್ರಾಮೀಣ ವಿದ್ಯಾರ್ಥಿಗಳ ಬಾಳಿಗೆ ಬೆಳಕಾಗಿದ್ದಾರೆ ಎಂದು ಅಬಕಾರಿ ಸಚಿವ ಆರ್.ಬಿ ತಿಮ್ಮಾಪುರ್ ಹೇಳಿದರು.

ಅವರು ಬವರಾಜ್ ಹೊರಟ್ಟಿಯವರ ಹುಟ್ಟೂರಾದ ಯಡಹಳ್ಳಿಯಲ್ಲಿ ಶಿವಲಿಂಗಪ್ಪ ಬಸಪ್ಪ ಹೊರಟ್ಟಿ ಕರ್ನಾಟಕ ಪಬ್ಲಿಕ್ ಸ್ಕೂಲ್‌ನಲ್ಲಿ ನಿರ್ಮಾಣಗೊಂಡ ನೂತನ ಕೊಠಡಿಗಳನ್ನು ಲೋಕಾರ್ಪಣೆಗೊಳಿಸಿ ಮಾತನಾಡಿದರು.

ಯಡಹಳ್ಳಿಯಲ್ಲಿ ನಿರ್ಮಾಣಗೊಂಡ ಶಾಲೆ 'ಹೈಟೆಕ್ ಶಾಲೆ' ಎಂದೇ ಪ್ರಸಿದ್ಧಿ ಹೊಂದಿದೆ. ಕೋಟ್ಯಾಂತರ ರೂ. ಬೆಲೆಬಾಳುವ 7 ಎಕರೆ ಜಮೀನನ್ನ ಸರಕಾರಿ ಶಾಲೆಗೆ ನೀಡಿ, 30 ಕೋಟಿಗೂ ಹೆಚ್ಚು ಹಣ ವ್ಯಯಿಸಿದ್ದಾರೆ. ಯಡಹಳ್ಳಿಗೆ ಮಹಿಳಾ ಮಹಾವಿದ್ಯಾಲಯ, ಐಟಿಐ ಕಾಲೇಜು, ಪ್ರಾಥಮಿಕ ಆರೋಗ್ಯ ಕೇಂದ್ರ, ಗ್ರಂಥಾಲಯ, ಬಾಲಕ ಮತ್ತು ಬಾಲಕಿಯರ ವಸತಿ ನಿಲಯ ಹೀಗೆ ಹತ್ತಾರು ಕೆಲಸಗಳನ್ನು ತಮ್ಮೂರಿಗೆ ಕಲ್ಪಿಸಿಕೊಟ್ಟಿದ್ದಾರೆ. ಇಂತಹ ಜನಪ್ರತಿನಿಧಿಗಳ ಅಗತ್ಯ ಹೆಚ್ಚಿದೆ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಬಸವರಾಜ್ ಹೊರಟ್ಟಿ, ನಮ್ಮ ತಂದೆಯವರ ಕನಸಿನ ಶಾಲೆ ಇದಾಗಿದೆ. ಇದರ ಸದುಪಯೋಗವನ್ನು ಈ ಭಾಗದ ಪ್ರತಿಯೊಬ್ಬ ವಿದ್ಯಾರ್ಥಿಯೂ ಪಡೆಯಬೇಕು. ಕಳೆದ ನಾಲ್ಕು ದಶಕಗಳಿಂದ ಸಾರ್ವಜನಿಕ ಸೇವೆ ಮಾಡಲು ನನಗೆ ಸ್ಫೂರ್ತಿಯೇ ನನ್ನ ಹೆತ್ತ ತಂದೆ-ತಾಯಿಗಳು. ವಿದ್ಯಾರ್ಥಿಗಳು ಸಹ ತಮ್ಮ ಹೆತ್ತವರನ್ನು ಎಂದಿಗೂ ನಿರ್ಲಕ್ಷಿಸಬೇಡಿ ಎಂದರು.

ಈ ಶಾಲೆಯಿಂದಾಗಿ ಯಡಹಳ್ಳಿ ಗ್ರಾಮದತ್ತ ಸಾರ್ವಜನಿಕ ಶಿಕ್ಷಣ ಇಲಾಖೆ, ಜನಪ್ರತಿನಿಧಿಗಳು ನೋಡುವಂತಾಗಿದೆ. ಈ ಶಾಲೆಗೆ ಈಗಾಗಲೇ ರಾಷ್ಟ್ರ ಪ್ರಶಸ್ತಿ, ರಾಜ್ಯ ಪ್ರಶಸ್ತಿಗಳು ಅರಸಿ ಬಂದಿವೆ. ಅದಕ್ಕೆಲ್ಲ ಇಲ್ಲಿಯ ಶಿಕ್ಷಕ ವೃಂದದವರ ಸೇವೆಯೇ ಕಾರಣ. ಅವರಿಗೂ ನಾನು ಶಿಕ್ಷಕರ ದಿನಾಚರಣೆಯ ಶುಭ ದಿನದಂದು ಹೃದಯಪೂರ್ವಕವಾಗಿ ಶುಭಾಶಯಗಳನ್ನು ಕೋರುತ್ತೇನೆ ಎಂದರು.

ಇದೇ ಸಂದರ್ಭದಲ್ಲಿ ಬಸವರಾಜ್ ಹೊರಟ್ಟಿ ಗಣಿತ ಪ್ರಯೋಗಾಲಯ ಹಾಗೂ ಮಿನಿ ತರಬೇತಿ ಕೇಂದ್ರಕ್ಕೆ ಧಾರವಾಡದ ಪ್ರಾದೇಶಿಕ ವಿಜ್ಞಾನ ಕೇಂದ್ರದ ನಿರ್ದೇಶಕ ಡಾ. ವೀರಣ್ಣ ಬೋಳಶೆಟ್ಟಿಯವರ ನೇತೃತ್ವದಲ್ಲಿ ತಯಾರಾದ 25ಕ್ಕೂ ಹೆಚ್ಚು ಗಣಿತ ಮಾದರಿಗಳನ್ನು, ಅವ್ವ ಸೇವಾ ಟ್ರಸ್ಟ್ ಪರವಾಗಿ ನೀಡಲಾಯಿತು.

ಈ ಸಂದರ್ಭದಲ್ಲಿ ಪ್ರಾ. ಜಯಲಕ್ಷ್ಮೀ ಪೆಟ್ಲೂರ, ಉಪ ಪ್ರಾಚಾರ್ಯ ಎಸ್.ಬಿ ಹಿರೇಮಠ, ಗಿರೀಶ ಲಕ್ಷಾಣಿ ಸೇರಿದಂತೆ ಶಿಕ್ಷಣ ಇಲಾಖೆಯ ಹಿರಿಯ ಅಧಿಕಾರಿಗಳು, ಎಸ್‌ಡಿಎಂಸಿ ಪದಾಧಿಕಾರಿಗಳು, ಶಾಲೆಯ ಸಿಬ್ಬಂದಿ ವರ್ಗ, ವಿದ್ಯಾರ್ಥಿಗಳು ಉಪಸ್ಥಿತರಿದ್ದರು.



> ಇಂದಿಗೂ ನಾನು ನನ್ನ ಬಾಲ್ಯದ ಸ್ನೇಹಿತರನ್ನ ಮರೆತಿಲ್ಲ. ಸ್ಥಾನಮಾನಗಳು ಮುಖ್ಯವಲ್ಲ. ನಮಗೆ ಮಾನವೀಯ ಸಂಬಂಧಗಳು ಮುಖ್ಯ ಎಂಬ ಹಿನ್ನೆಲೆಯಲ್ಲಿ ನಾನು ಬೆಳೆದು ಬಂದವನು. ದೇಶದಲ್ಲಿಯೇ ಮಾದರಿಯಾದ ಈ ಶಾಲೆಯನ್ನು, ತಮ್ಮ ಮನೆಯನ್ನು ಜೋಪಾನ ಮಾಡಿಕೊಂಡಂತೆ ಈ ಊರಿನ ಜನ ಈ ಶಾಲೆಯನ್ನು ಶುಚಿಯಾಗಿಟ್ಟುಕೊಂಡು, ಜತನದಿಂದ ಕಾಪಾಡಿಕೊಂಡು 'ನಮ್ಮ ಶಾಲೆ ನಮ್ಮೂರಿನ ಶಾಲೆ ನಮ್ಮೆಲ್ಲರ ಶಾಲೆ' ಎಂಬ ಭಾವನೆಯಿಂದ ನೋಡಿಕೊಂಡು ಹೋಗಬೇಕಿದೆ.
>
> **- ಬಸವರಾಜ್ ಹೊರಟ್ಟಿ,**
> ಸಭಾಪತಿಗಳು.

### ಕರ್ನಾಟಕ ಪಬ್ಲಿಕ್ ಸ್ಕೂಲ್‌ನ ನೂತನ ಕೊಠಡಿಗಳನ್ನು ಲೋಕಾರ್ಪಣೆಗೊಳಿಸಿದ ಸಚಿವ ಆರ್.ಬಿ ತಿಮ್ಮಾಪೂರ

# ಹೊರಟ್ಟಿಯವರಂತಹ ಜನಪ್ರತಿನಿಧಿಗಳ ಅಗತ್ಯತೆಯಿದೆ

■ ವಿಜಯಸಾಕ್ಷಿ ಸುದ್ದಿ, ಗದಗ

ದೇಶದ ಇತಿಹಾಸದಲ್ಲಿಯೇ ಅತ್ಯಂತ ಹಿರಿಯ ವಿಧಾನ ಪರಿಷತ್ ಸದಸ್ಯರೆಂಬ ಕೀರ್ತಿಗೆ ಪಾತ್ರರಾದ ಸಭಾಪತಿ ಬಸವರಾಜ ಹೊರಟ್ಟಿಯವರು ಮುಧೋಳ ತಾಲೂಕಿಗೆ ನೀಡಿದ ಕೊಡುಗೆ ಹಾಗೂ ವಿಶೇಷವಾಗಿ ಹುಟ್ಟೂರಿನ ಯಡಹಳ್ಳಿಯಲ್ಲಿ ದೇಶದಲ್ಲಿಯೇ ಮಾದರಿಯಾದ ಸರಕಾರಿ ಶಾಲೆಯನ್ನು ಕಟ್ಟುವ ಮೂಲಕ ಈ ಭಾಗದ ಲಕ್ಷಾಂತರ ಗ್ರಾಮೀಣ ವಿದ್ಯಾರ್ಥಿಗಳ ಬಾಳಿಗೆ ಬೆಳಕಾಗಿದ್ದಾರೆ ಎಂದು ಅಬಕಾರಿ ಸಚಿವ ಆರ್.ಬಿ ತಿಮ್ಮಾಪುರ್ ಹೇಳಿದರು.



ಅವರು ಬವರಾಜ್ ಹೊರಟ್ಟಿಯವರ ಹುಟ್ಟೂರಾದ ಯಡಹಳ್ಳಿಯಲ್ಲಿ ಶಿವಲಿಂಗಪ್ಪ ಬಸಪ್ಪ ಹೊರಟ್ಟಿ ಕರ್ನಾಟಕ ಪಬ್ಲಿಕ್ ಸ್ಕೂಲ್‌ನಲ್ಲಿ ನಿರ್ಮಾಣಗೊಂಡ ನೂತನ ಕೊಠಡಿಗಳನ್ನು ಲೋಕಾರ್ಪಣೆಗೊಳಿಸಿ ಮಾತನಾಡಿದರು.

ಯಡಹಳ್ಳಿಯಲ್ಲಿ ನಿರ್ಮಾಣಗೊಂಡ ಶಾಲೆ 'ಹೈಟೆಕ್ ಶಾಲೆ' ಎಂದೇ ಪ್ರಸಿದ್ಧಿ ಹೊಂದಿದೆ. ಕೋಟ್ಯಾಂತರ ರೂ. ಬೆಲೆಬಾಳುವ 7 ಎಕರೆ ಜಮೀನನ್ನ ಸರಕಾರಿ ಶಾಲೆಗೆ ನೀಡಿ, 30 ಕೋಟಿಗೂ ಹೆಚ್ಚು ಹಣ ವ್ಯಯಿಸಿದ್ದಾರೆ. ಯಡಹಳ್ಳಿಗೆ ಮಹಿಳಾ ಮಹಾವಿದ್ಯಾಲಯ, ಐಟಿಐ ಕಾಲೇಜು, ಪ್ರಾಥಮಿಕ ಆರೋಗ್ಯ ಕೇಂದ್ರ, ಗ್ರಂಥಾಲಯ, ಬಾಲಕ ಮತ್ತು ಬಾಲಕಿಯರ ವಸತಿ ನಿಲಯ ಹೀಗೆ ಹತ್ತಾರು ಕೆಲಸಗಳನ್ನು ತಮ್ಮೂರಿಗೆ ಕಲ್ಪಿಸಿಕೊಟ್ಟಿದ್ದಾರೆ. ಇಂತಹ ಜನಪ್ರತಿನಿಧಿಗಳ ಅಗತ್ಯ ಹೆಚ್ಚಿದೆ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಬಸವರಾಜ್ ಹೊರಟ್ಟಿ, ನಮ್ಮ ತಂದೆಯವರ ಕನಸಿನ ಶಾಲೆ ಇದಾಗಿದೆ. ಇದರ ಸದುಪಯೋಗವನ್ನು ಈ ಭಾಗದ ಪ್ರತಿಯೊಬ್ಬ ವಿದ್ಯಾರ್ಥಿಯೂ ಪಡೆಯಬೇಕು. ಕಳೆದ ನಾಲ್ಕು ದಶಕಗಳಿಂದ ಸಾರ್ವಜನಿಕ ಸೇವೆ ಮಾಡಲು ನನಗೆ ಸ್ಪೂರ್ತಿಯೇ ನನ್ನ ಹೆತ್ತ ತಂದೆ-ತಾಯಿಗಳು. ವಿದ್ಯಾರ್ಥಿಗಳು ಸಹ ತಮ್ಮ ಹೆತ್ತವರನ್ನು ಎಂದಿಗೂ ನಿರ್ಲಕ್ಷಿಸಬೇಡಿ ಎಂದರು.

ಈ ಶಾಲೆಯಿಂದಾಗಿ ಯಡಹಳ್ಳಿ ಗ್ರಾಮದತ್ತ ಸಾರ್ವಜನಿಕ ಶಿಕ್ಷಣ ಇಲಾಖೆ, ಜನಪ್ರತಿನಿಧಿಗಳು ನೋಡುವಂತಾಗಿದೆ. ಈ ಶಾಲೆಗೆ ಈಗಾಗಲೇ ರಾಷ್ಟ್ರ ಪ್ರಶಸ್ತಿ, ರಾಜ್ಯ ಪ್ರಶಸ್ತಿಗಳು ಅರಸಿ ಬಂದಿವೆ. ಅದಕ್ಕೆಲ್ಲ ಇಲ್ಲಿಯ ಶಿಕ್ಷಕ ವೃಂದದವರ ಸೇವೆಯೇ ಕಾರಣ. ಅವರಿಗೂ ನಾನು ಶಿಕ್ಷಕರ ದಿನಾಚರಣೆಯ ಶುಭ ದಿನದಂದು ಹೃದಯಪೂರ್ವಕವಾಗಿ ಶುಭಾಶಯಗಳನ್ನು ಕೋರುತ್ತೇನೆ ಎಂದರು.

ಇದೇ ಸಂದರ್ಭದಲ್ಲಿ ಬಸವರಾಜ್ ಹೊರಟ್ಟಿ ಗಣಿತ ಪ್ರಯೋಗಾಲಯ ಹಾಗೂ ಮಿನಿ ತರಬೇತಿ ಕೇಂದ್ರಕ್ಕೆ ಧಾರವಾಡದ ಪ್ರಾದೇಶಿಕ ವಿಜ್ಞಾನ ಕೇಂದ್ರದ ನಿರ್ದೇಶಕ ಡಾ. ವೀರಣ್ಣ ಬೋಳಶೆಟ್ಟಿಯವರ ನೇತೃತ್ವದಲ್ಲಿ ತಯಾರಾದ 25ಕ್ಕೂ ಹೆಚ್ಚು ಗಣಿತ ಮಾದರಿಗಳನ್ನು ಅವ್ವ ಸೇವಾ ಟ್ರಸ್ಟ್ ಪರವಾಗಿ ನೀಡಲಾಯಿತು.

ಈ ಸಂದರ್ಭದಲ್ಲಿ ಪ್ರಾ. ಜಯಲಕ್ಷ್ಮೀ ಪೆಟ್ಲೂರ, ಉಪ ಪ್ರಾಚಾರ್ಯ ಎಸ್.ಬಿ ಹಿರೇಮಠ, ಗಿರೀಶ ಲಕ್ಷಾಣಿ ಸೇರಿದಂತೆ ಶಿಕ್ಷಣ ಇಲಾಖೆಯ ಹಿರಿಯ ಅಧಿಕಾರಿಗಳು, ಎಸ್‌ಡಿಎಂಸಿ ಪದಾಧಿಕಾರಿಗಳು, ಶಾಲೆಯ ಸಿಬ್ಬಂದಿ ವರ್ಗ, ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

> ಇಂದಿಗೂ ನಾನು ನನ್ನ ಬಾಲ್ಯದ ಸ್ನೇಹಿತರನ್ನ ಮರೆತಿಲ್ಲ. ಸ್ಥಾನಮಾನಗಳು ಮುಖ್ಯವಲ್ಲ. ನಮಗೆ ಮಾನವೀಯ ಸಂಬಂಧಗಳು ಮುಖ್ಯ ಎಂಬ ಹಿನ್ನೆಲೆಯಲ್ಲಿ ನಾನು ಬೆಳೆದು ಬಂದವನು. ದೇಶದಲ್ಲಿಯೇ ಮಾದರಿಯಾದ ಈ ಶಾಲೆಯನ್ನು, ತಮ್ಮ ಮನೆಯನ್ನು ಜೋಪಾನ ಮಾಡಿಕೊಂಡಂತೆ ಈ ಊರಿನ ಜನ ಈ ಶಾಲೆಯನ್ನು ಶುಚಿಯಾಗಿಟ್ಟುಕೊಂಡು, ಜತನದಿಂದ ಕಾಪಾಡಿಕೊಂಡು 'ನಮ್ಮ ಶಾಲೆ ನಮ್ಮೂರಿನ ಶಾಲೆ ನಮ್ಮೆಲ್ಲರ ಶಾಲೆ' ಎಂಬ ಭಾವನೆಯಿಂದ ನೋಡಿಕೊಂಡು ಹೋಗಬೇಕಿದೆ.
>
> – ಬಸವರಾಜ್ ಹೊರಟ್ಟಿ,
> ಸಭಾಪತಿಗಳು.